ಇ) ಕರ್ನಾಟಕ ಸರ್ಕಾರವು ಜಮೀನು ಹಾಗೂ ಮನೆ ಕಳೆದುಕೊಳ್ಳುತ್ತಿರುವ ಕೃಷಿಕರಿಗೆ ಪುನರ್ವಸತಿ ಹಾಗೂ ಪುನರ್‌ನಿರ್ಮಾಣದ ಪ್ರಸ್ತಾವನೆಯನ್ನು ರೂ. 19.12 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು ಒಪ್ಪಿಗೆ ನೀಡಿದೆ. ಈ ಮೊತ್ತವನ್ನು ಕಂಪನಿಯು (ನೈಸೆಲ್) ತನ್ನ ಸ್ವಂತ ಬಂಡವಾಳದಲ್ಲಿ ಜಮೀನು ಹಾಗೂ ಮನೆ ಕಳೆದುಕೊಳ್ಳುತ್ತಿರುವ ಕುಟುಂಬ ಅಥವಾ ಸದಸ್ಯರಿಗೆ ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣ ಕಲ್ಪಿಸಿಕೊಡುವುದು.

ಮಂಡ್ಯ ಜಿಲ್ಲೆಯಲ್ಲಿನ ಪ್ರವಾಸಿ ಕೇಂದ್ರ ಹಾಗೂ ಪ್ರೇಕ್ಷಣೆಯ ಸ್ಥಳಗಳನ್ನು ಅಭಿವೃದ್ಧಿ ಗೊಳಿಸುವುದು.

2194(2793) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ಜಿಲ್ಲೆಯಲ್ಲಿ ಗುರುತಿಸಲಾದ ಪ್ರವಾಸಿ ಕೇಂದ್ರ ಹಾಗೂ ಪ್ರೇಕ್ಷಣೀಯ ಸ್ಥಳಗಳು ಯಾವುವು?

ಆ) ಇವುಗಳ ಅಭಿವೃದ್ಧಿಗೆ ಸರ್ಕಾರವು ಈವರೆವಿಗೆ ಯಾವ ಕ್ರಮಗಳನ್ನು ಕೈಗೊಂಡಿದೆ?

ಇ) ಯಾವುದೇ ಸೌಲಭ್ಯವಿಲ್ಲದ ಪ್ರವಾಸಿ ಕೇಂದ್ರಗಳು ಯಾವುವು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :—

ಅ) ಶ್ರೀರಂಗಪಟ್ಟಣ, ಮೇಲುಕೋಟಿ, ಶಿವನಸಮುದ್ರ, ಕೊಕ್ಕರೆ ಬೆಳ್ಳೂರು, ಹೊಸಹೊಳಲು, ಬಸರಾಳು, ಹೊಸಬೂದನೂರು, ಕಿಕ್ಕೇರಿ, ಗಾಣದಾಳ.

Srirangapattana, Melkote, Shivana Samudra, Kokkarebellur, Hosaholalu, Basaralu, Hosabudanur, Kikkeri, Ganadalu.

ಅ) ನಿರ್ಮಿಸಲಾದ ಸೌಲಭ್ಯಗಳು	ನಿರ್ಮಿಸಲು ಉದ್ದೇಶಿಸಿರುವ ಸೌಲಭ್ಯಗಳು
1. ಶ್ರೀರಂಗಪಟ್ಟಣ	
1. ಉಪಹಾರಗೃಹ ಮತ್ತು ಶೌಚಾಲಯ (ಶ್ರೀರಂಗನಾಥಸ್ವಾಮಿ ದೇವಸ್ಥಾನದ ಬಳಿ	1) ಸಮ್ಮರ್ ಪ್ಯಾಲೇಸ್ ಮತ್ತು ಗುಂಬಜ್‌ಗಳಿಗೆ ಹೊಸಲು ಬೆಳಕು
2. ಬಸ್ ನಿಲ್ದಾಣದ ಬಳಿ ಶೌಚಾಲಯ	2) ಯಾತ್ರಿ ನಿವಾಸ ನಿರ್ಮಾಣ
3. ಕಾವೇರಿ ನದಿ ತೀರದ ಕುಟೀರಗಳು	3) ದೇವಾಲಯದ ಬಳಿ ಸುಲಭ ಶೌಚಾಲಯ
4. ಗುಂಬಜ್ ಬಳಿ ಶೌಚಾಲಯ	

ಅ) ನಿರ್ಮಿಸಲಾದ ಸೌಲಭ್ಯಗಳು		ನಿರ್ಮಿಸಲು ಉದ್ದೇಶಿಸಿರುವ ಸೌಲಭ್ಯಗಳು
2. ಮೇಲುಕೋಟೆ		
1. ಪ್ರವಾಸಿ ಬಂಗಲೆ		
2. ಸುಲಭ ಶೌಚಾಲಯ		
3. ಶಿವನ ಸಮುದ್ರದ ಬಳಿ		
1. ಹೆದ್ದಾರಿ ಸೌಲಭ್ಯ	1)	ದರ್ಗಾದ ಬಳಿ ಸುಲಭ ಶೌಚಾಲಯ
4. ಮಂಡ್ಯದಲ್ಲಿ		
1. ಹನುಮಂತನಗರದಲ್ಲಿ ಯಾತ್ರಿಕ	1)	ಪ್ರವಾಸಿ ಮಾಹಿತಿ ಕೇಂದ್ರದ ನಿರ್ಮಾಣ
2. ಹನುಮಂತನಗರದಲ್ಲಿ ಶೌಚಾಲಯ		
5. ಮದ್ದೂರಿನಲ್ಲಿ		
1. ಮಿಡ್‌ವೇ ರೆಸ್ಟೋರೆಂಟ್		
6. ಕೆ.ಆರ್. ಸಾಗರದಲ್ಲಿ		
1. ಹೋಟೆಲ್ ಮಯೂರ, ಕಾವೇರಿ	1)	ವಾಹನ ನಿಲುಗಡೆಯ ಜಾಗದಲ್ಲಿ
2. ದೋಣಿ ವಿಹಾರ ಕೇಂದ್ರ		ಶೌಚಾಲಯ ನಿರ್ಮಾಣ
7. ಕೆರೆ ತೊಣ್ಣೂರಿನಲ್ಲಿ		
	1)	ರಸ್ತೆ ಬದಿಯ ಸೌಲಭ್ಯ
8 ಹೇಮಗಿರಿಯಲ್ಲಿ		
	1)	ಶೌಚಾಲಯ ನಿರ್ಮಾಣ
9. ಪರಿಸರ ಪ್ರವಾಸೋದ್ಯಮ ಸೌಲಭ್ಯ		
1. ಭೀಮೇಶ್ವರಿಯಲ್ಲಿ		
2. ದೊಡ್ಡಮಾಕಳಿ ಬಳಿ		
10. ಆದಿಚುಂಚನಗಿರಿಯಲ್ಲಿ		
1. ಯಾತ್ರಿಕ		
11. ಕೊಕ್ಕರೆ ಬೆಳ್ಳೂರು		
	1)	ಶೌಚಾಲಯ ನಿರ್ಮಾಣ

Facilities created	Facilities Proposed
At Srirangapattana	
1. Restaurant and Toilet Facilities near Sri Ranganatha Swamy Temple	1. Illumination to Summer Palace and gumbaz
2. Sulabh Souchalaya complex near Bus Station	2. Construction of Yatrinivas
3. River side Cottages	3. Construction of Souchalaya near Temple
4. Public Conveniences and Drinking Water facility near Gumbaz.	
At Melkote	
1. Tourist Bungalow	
2. Public Conveniences	
At Shivanasamudra	
1. Wayside Facility	1. Construction of Public convenience near Darga
At Mandya	
1. Yatrika at Hanumanthanagar	1. Construction of Tourist Receiption C entre at Mandya
2. Public Conveniences at Hanumanthanagar	
At Maddur	
1. Midway Restaurant	

At K.R. Sagar

1. Hotel Mayura Cauvery
2. Boating facilities

1. Public Convenience near parking place

At Kere Thonnur

1. Wayside Amenities

At Hemagiri

1. Public Convenience

ECO TOURIST FACILITIES

1. At Bheemeshwari
2. At Doddamakali

At Adichunchanagiri

1. Yatrika

At Kokkare Bellur

1. Public Convenience

ಇ) ಬಸರಾಳು, ಹೊಸಬೂದನೂರು, ಕಿಕ್ಕೇರಿ ಮತ್ತು ಗಾಣದಾಳು.

Basaralu, Hosabudanur, Kikkeri and Ganadalu.

ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ ಜನರೇಷನ್ ಘಟಕ ಸ್ಥಾಪನೆ.

2195(2794) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ ಜನರೇಷನ್ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಘಟಕದ ವಿವರಗಳೇನು;

ಇ) ರಾಜ್ಯದಲ್ಲಿನ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಕೋ-ಜನರೇಷನ್ ಘಟಕ ಸ್ಥಾಪಿಸಲು ಯೋಜನೆಯನ್ನು ಕೈಗೊಳ್ಳಲಾಗುವುದೆ?